ಅನುಮತಿಯೂ ಇರುತ್ತಿರಲಿಲ್ಲ. ತರಗತಿಯ ಕಠಿಣ ಪಾಠಕ್ರಮಗಳು ಅವನ ತಲೆಯೊಳಗೆ ಇಳಿಯುತ್ತಲೂ ಇರಲಿಲ್ಲ. ಒಟ್ಟಾರೆ ತರಗತಿಗಳು, ಹಾಸ್ಟೆಲ್ ಜೀವನ ಕ್ರಮ ಸೂರ್ಯನನ್ನು ತಿಂಗಳೊಳಗೆ ಹೈರಾಣಾಗಿಸಿತ್ತು. ಹೆತ್ತವರನ್ನಂತೂ ನೋಡಲು ಸಾಧ್ಯವಿರಲಿಲ್ಲ.

ವಾರಕ್ಕೊಮ್ಮೆ ದೂರವಾಣಿ ಕರೆ ಮಾಡಬಹುದಾಗಿತ್ತು. ಪ್ರತಿ ಗುರುವಾರ ವಿಜಯಮ್ಮ ತಪ್ಪದೇ ಕರೆ ಮಾಡುವಾಗ, ಸೂರ್ಯ ಅಳುತ್ತ ಹೇಳುತ್ತಿದ್ದದ್ದು ಒಂದೇ ಮಾತು,'ನಾನು ಇರಲಿಲ್ಲ.. ನನಗೆ ಇಲ್ಲಿರಲು ಆಗಲ್ಲ... ನಾನಲ್ಲಿಗೆ ಬಂದು ಬಿಡ್ತೀನಿ...'

'ಈಗ ಹೊಸತಲ್ವಾ ಸೂರ್ಯ... ಹಾಗಾಗಿ ಆ ಜೀವನ ಶೈಲಿ ನಿನಗೆ ಕಷ್ಟವಾಗುತ್ತೆ... ಕ್ರಮೇಣ ನಿನಗೆ ಅಭ್ಯಾಸವಾಗುತ್ತೆ. ಈಗ ನಿನಗೆ ಕಷ್ಟ ಅನ್ನಿಸಬಹುದು. ಮುಂದೆ ನಿನಗೆ ನಾವು ಯಾಕೆ ಹಾಗೆ ಮಾಡಿದೆವು ಅಂತ ಅರ್ಥವಾಗುತ್ತೆ. ನೀನಲ್ಲಿ ಹೇಗೆ ಕಷ್ಟ ಪಡ್ತಿದ್ದೀಯೋ... ನಿನ್ನ ಬಿಟ್ಟಿರೋದು ನಮ್ಗೂ ಹಾಗೆ ಕಷ್ಟವಾಗ್ತಿದೆ ಕಣೋ... ನೀನಿಲ್ದೆ ಮನೆ ಭಣಗುಡ್ತಾ ಇದೆ... ನಿಮ್ಮಪ್ಪ ನಿನ್ನ ತುಂಬಾ ನೆನೆಸಿಕೊಳ್ತಾರೆ..'

'ಸುಳ್ಳು ..ಎಲ್ಲಾ ಸುಳ್ಳು. ಅಪ್ಪನ ಹೆಸರು ಎತ್ತಲೇ ಬೇಡ.. ಅಪ್ಪನಿಗೆ ನನ್ನ ಕಂಡ್ರೆ ಪ್ರೀತಿನೇ ಇಲ್ಲ...! ಅಲ್ಲಿದ್ದಾಗಲೂ ಹೊಡೆದು ಬಡಿದು ಮಾಡ್ತಿದ್ರು... ಈಗ ನನ್ನ ದೂರ ಕಳಿಸಿ... ಹಾಯಾಗಿರಬೇಕು ಅಲ್ವಾ?' ಎಂದು ಕಿಡಿಕಾರಿದ.

ಇನ್ನೊಂದು ತಿಂಗಳು ಕಳೆಯುವ ಹೊತ್ತಿಗೆ ಸೂರ್ಯ ಸಂಪೂರ್ಣವಾಗಿ ಹೈರಾಣಾದ. ಇದು ತನಗೆ ಒಗ್ಗದ ಜೀವನ ಕ್ರಮ ಎಂಬುದು ಅವನಿಗೆ ಪ್ರತಿ ಕ್ಷಣ ಅನ್ನಿಸುತ್ತಿದ್ದರಿಂದ ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ಅವನ ಮನಸ್ಸು ಒಡಂಬಡಲಿಲ್ಲ. ಹಾಗಾಗಿ ಅವನ ಮನಸ್ಥಿತಿಯ ಮತ್ತೊಬ್ಬ ಹುಡುಗನ ಸೇರಿ ಒಂದು ಕೆಟ್ಟ ನಿರ್ಧಾರಕ್ಕೆ ಬಂದಿದ್ದ. ಅಂದು ಶಾಲೆ ಬಿಟ್ಟ ಸಂದರ್ಭದಲ್ಲಿ ಶೌಚಾಲಯದಲ್ಲಿ ಅಡಗಿ ಕುಳಿತು, ಸ್ಕೂಲ್ ವ್ಯಾನು ಹಾಸ್ಟೆಲಿಗೆ ಹೊರಟು ಹೋದ ಬಳಿಕ, ಶಾಲೆಯ ಹಿಂಬದಿ ಇದ್ದ ಕಂಪೌಂಡು ಗೋಡೆಯನ್ನೇರಿ ಹೊರಗಿನ ರಸ್ತೆ ಧುಮುಕಿ ಪರಾರಿಯಾಗಿದ್ದರು. ಆದರೆ ಕೈಯಲ್ಲಿ ಬಿಡಿಗಾಸೂ ಇರಲಿಲ್ಲ. ಆ ವಾತಾವರಣದಿಂದ ಹೊರಗೆ ಹೋಗಬೇಕೆಂದು ತೋಚಿತ್ತೇ ಹೊರತು ಎಲ್ಲಿ ಹೋಗಬೇಕೆಂದು ನಿರ್ಧರಿಸಿರಲಿಲ್ಲ. ರೈಲ್ವೇ ಸ್ಟೇಷನ್ನಿಗೆ ಹೋಗಿ ಅಲ್ಲಿಂದ ಬೆಂಗಳೂರು ಸೇರಿಕೊಳ್ಳುವುದೆಂದು ಮಾತನಾಡಿ ಅಲೆದಾಡುತ್ತ ರೈಲ್ವೇ ನಿಲ್ದಾಣ ತಲುಪುವ ಹೊತ್ತಿಗೆ ನಿತ್ರಾಣ ಹಸಿವು ಇಬ್ಬರನ್ನೂ ಕಂಗೆಡಿಸಿತ್ತು. ಹೇಗೋ ನೀರು ಕುಡಿದು ಅಲೆದಾಡಿ, ರೈಲಿಗೆ ಕಾಯುತ್ತ ನಿಂತಾಗ ಇವರ ಚಲನವಲನ, ಧರಿಸಿದ ಸಮವಸ್ತ್ರವನ್ನು ಗಮನಿಸಿ ಅಲ್ಲಿದ್ದ ರೈಲ್ವೇ ಪೋಲೀಸರು ಅವರನ್ನು ಹಿಡಿದು ಶಾಲೆಯ ಸಿಬ್ಬಂದಿಗೆ ಒಪ್ಪಿಸುವ ಹೊತ್ತಿಗೆ ಇವರಿಬ್ಬರೂ ಕಾಣೆಯಾದ ಸುದ್ದಿ ಬೆಂಗಳೂರಿನಲ್ಲಿದ್ದ ರಾಯರಿಗೂ, ವಿಜಯಮ್ಮನಿಗೆ ಮುಟ್ಟಿತ್ತು. ಸ್ವಲ್ಪ ಹೊತ್ತಿನಲ್ಲೇ ಮಕ್ಕಳು ದೊರೆತರೆಂಬ ಮಾಹಿತಿ ಅವರಿಗೆ ರವಾನೆಯಾದಾಗ ಸಮಾಧಾನ ಪಡುವಂತಾಗಿತ್ತು. ಕೂಡಲೇ ಉಡುಪಿಗೆ ಹೊರಟು ಬರಬೇಕೆನ್ನುವ ಆದೇಶ ದೊರಕಿ, ಅವರಿಬ್ಬರೂ ಉಡುಪಿಯ ಶಾಲೆ ತಲುಪಿದಾಗ ಶಾಲೆಯ ಆಡಳಿತ ಮಂಡಳಿ ಕಠಿಣವಾದ ನಿರ್ಧಾರ ತಳೆದಿತ್ತು.

'ನಿಮ್ಮ ಮಕ್ಕಳಿಂದ ನಮ್ಮ ಶಾಲೆಗೆ ಕೆಟ್ಟ ಹೆಸರು ಬಂದಿದೆ... ಇವತ್ತಿನ ಪೇಪರಿನಲ್ಲಿ ಈ ಸುದ್ದಿ ಪ್ರಕಟವಾಗಿದೆ... ನಿಮ್ಮ ಮಕ್ಕಳನ್ನು ನಾವು ಇಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ.. ಟಿ.ಸಿ ಕೊಡ್ತಿದ್ದೇವೆ. ಕರ್ಕೊಂಡು ಹೋಗಿ..!' ರಾಯರು ಎಷ್ಟು ವಿನಂತಿಸಿಕೊಂಡರೂ, ಅಂಗಲಾಚಿದರೂ ಶಾಲೆ ಆಡಳಿತ ಮಂಡಳಿ ಬಗ್ಗಲೇ ಇಲ್ಲ. ಸೂರ್ಯ ಒಳಗೇ ಖುಷಿ ಪಟ್ಟ.

ವಿಧಿಯಿಲ್ಲದೇ ಪ್ರಭಾಕರರಾಯರು, ವಿಜಯಮ್ಮ ಮಗನ ಸರಂಜಾಮುಗಳನ್ನು ಕಟ್ಟಿಕೊಂಡು ಮರಳಿ ಬೆಂಗಳೂರಿಗೆ ಕರೆತರಬೇಕಾಯಿತು.

'ಸೂರ್ಯ ಈ ಜನ್ಮದಲ್ಲಿ ಉದ್ಧಾರವಾಗಲ್ಲ ಕಣೇ... ಅವ್ನು ಅಲ್ಲಿ ಇದ್ದು ಸರಿ ಹೋಗ್ತಾನೆ ಅಂದ್ಕೊಂಡೆ.. ಫೀಸು, ಖರ್ಚು ಎಲ್ಲ ದಂಡವಾಯಿತು' ತಮ್ಮ ಸಂಕಟ ತಡೆಯಲಾರದೇ ಸೂರ್ಯನ ಬೆನ್ನ ಮೇಲೆ ಬಿಗಿದರು.

'ಹೊಡೀರಿ... ಬಡೀರಿ... ನನ್ನ ಕೊಂದು ಹಾಕಿಬಿಡಿ... ಆಗ ನಿಮ್ಗೆ ಸಮಾಧಾನ ಸಿಗಬಹುದು' ಸೂರ್ಯನ ಸಿಟ್ಟು, ಸೆಡವು ನಿಯಂತ್ರಣದ ರೇಖೆ ಮೀರುತ್ತಿತ್ತು. ತನ್ನ ಆಕ್ರೋಶವನ್ನು ಅದುಮಿಡಲಾರದೆ ಕೈಗೆ ಸಿಕ್ಕಿದ್ದನ್ನು ಬಿಸಾಡುತ್ತಿದ್ದ.

ಅವನನ್ನು ಮನೆಯಲ್ಲಿ ಖಾಲಿ ಕುಳ್ಳಿರಿಸಲಾಗದೇ ಸಮೀಪದಲ್ಲಿದ್ದ ಹೈಸ್ಕೂಲಿಗೆ ದಾಖಲಾತಿ ಕೊಡಿಸಿದರು. ಸೂರ್ಯನದ್ದು ಮತ್ತೆ ಯಥಾಸ್ಥಿತಿ, ಅದೇ ಹಳೆಯ ಗೆಳೆಯರ ಸಹವಾಸ, ಕ್ರಿಕೆಟ್ ಹುಚ್ಚು ಮುಂದುವರಿದಾಗ ರಾಯರು ಮತ್ತೆ ಅಸಹಾಯಕರಾದರು. ಅವನು ತನ್ನ ದಾರಿಗೆ ಬರುವುದಿಲ್ಲ ಎಂಬುದು ಅವರಿಗೆ ಖಾತ್ರಿಯಾಗಿತ್ತು. ಹಾಗೆಂದು ಅವನನ್ನು ಹಾಗೇ ಬಿಡಲು ಸಾಧ್ಯವಿರಲಿಲ್ಲ. ಮಗನಿಗೆ ತಂದೆಯ ತಲೆ ಕಂಡರೇನೇ ಆಗದಂಥ ಪರಿಸ್ಥಿತಿ ಉದ್ಭವವಾಗಿತ್ತು. ಇಬ್ಬರ ನಡುವಿನ ಮಾತುಕತೆ ನಿಂತು ಹೋಗಿತ್ತು. ತನ್ನ ಅವಶ್ಯಕತೆಗಳನ್ನು ಸೂರ್ಯ ತಾಯಿಯ ಮುಂದೆ ಅರುಹುತ್ತಿದ್ದ.

'ನನ್ಗೆ ಇನ್ನೂರು ರೂಪಾಯಿ ಬೇಕು, 'ನನ್ಗೆ ಕ್ರಿಕೆಟ್ ಬ್ಯಾಟ್ ಬೇಕು..' ಇತ್ಯಾದಿ, ಇತ್ಯಾದಿ. ವಿಜಯಮ್ಮ ನಿರಾಕರಿಸಿದರೆ ಕೈಗೆ ಸಿಕ್ಕಿದ್ದನ್ನು ಬಿಸಾಡಿ ಮನೆಯಲ್ಲಿ ರಂಪವೆಬ್ಬಿಸುತ್ತಿದ್ದ. ಮಗನ ವರ್ತನೆ ಹೆತ್ತವರಿಗೆ ನಿದ್ದೆಯಿಂದ ವಂಚಿತರನ್ನಾಗಿಸಿತು.

'ಇದೇಕೋ ಪರಿಸ್ಥಿತಿ ವಿಕೋಪಕ್ಕೆ ಹೋಗ್ತಾ ಇದೆ... ಸೂರ್ಯ ಮಾತು ಮಾತಿಗೆ ಈ ರೀತಿ ಸಿಟ್ಟೇಳುತ್ತಿದ್ದರೆ.. ಅವ್ನಿಗೇ ತನ್ನ ದೌರ್ಬಲ್ಯವೇ ಮಾರಕವಾಗಬಹುದು.. ಏನು ಮಾಡೋದು?'

'ಮಕ್ಕಳನ್ನು ಸ್ನೇಹಿತರಂತೆ ಕಾಣ್ಬೇಕು ಅಂತಾರೆ... ಆದ್ರೆ ಇಂಥವನ ಸ್ನೇಹ ಹೇಗೆ ಮಾಡೋದು ವಿಜಯ.. ನೀನೇ ಹೇಳು? ಇವ್ನು ಸರಿ ಹೋಗುವ ಯಾವ ಲಕ್ಷಣವೂ ಕಾಣೋದಿಲ್ಲ. ಇವ್ನು ಕೈ ಮೀರಿ ಹೋಗ್ತಿದ್ದಾನೆ ಅಂತ ಅನ್ನಿಸ್ತಾ ಇದೆ.. ಮಕ್ಕಳನ್ನು ಸರಿಯಾಗಿ ಬೆಳೆಸೋದು ಕೂಡಾ ಹೆತ್ತವರಿಗೆ ಒಂದು ಸವಾಲು! ಸಮಾಜಕ್ಕೆ ಸತ್ಪ್ರಜೆಯಾಗಿ ಮಕ್ಕಳನ್ನು ಬಿಡೋದು ಹೆತ್ತವರ ಕರ್ತವ್ಯ. ನಿಜ, ಅದರೆ ನಾವು ನಮ್ಮ ಕೈ ಮೀರಿ ಪ್ರಯತ್ನ ನಡೆಸಿದೆವು.. ಸೂರ್ಯ ನಮ್ಗೆ ತುಂಬಾ ನಿರಾಶೆ ಮಾಡ್ಬಿಟ್ಟ.. ಅವ್ನು ದೊಡ್ಡ ಸಾಧನೆ ಮಾಡ್ಬೇಕು.. ನಾವು ಹೆಮ್ಮೆ ಪಡುವಂತೆ ಅವ್ನು ಸಾಧನೆ ಮಾಡ್ಬೇಕು.. ಅನ್ನೋ ಆಸೆಗಳು ಮೊದಲು ಇರ್ತಿತ್ತು.. ಆದರೆ ಈಗ ಅವ್ನು ಯಾವ ಸಾಧನೆಗಳೂ ಬೇಡ, ಸಹಜವಾಗಿ ಜೀವನ ನಡೆಸಿದರೆ ಸಾಕು ಎಂಬಂತಾಗಿದೆ.'

'ಅವ್ನನ್ನು ತಿದ್ದುವ ಎಲ್ಲಾ ಪ್ರಯತ್ನ ನಾವು ಮಾಡಿದ್ದೇವೆ. ಅವ್ನು ಸರಿ ಹೋಗಲಿಲ್ಲ ಅಂದ್ರೆ ಅದು ಅವ್ನ ಹಣೆಬರಹ. ನಾವೇನು ಮಾಡಲಾಗುತ್ತೇ ಹೇಳಿ' ವಿಜಯಮ್ಮನೂ ಸೋತು ಕಡೆಗೆ ಕೈ ಚೆಲ್ಲಿದರು.

ಹೆತ್ತವರ ಅಂಕುಶ ಸಡಿಲವಾದಂತೆ, ಸೂರ್ಯನ ಬಿಡು ಬೀಸಾಗಿ ವರ್ತಿಸತೊಡಗಿದ. ತಾನು ಮಾಡಿದ್ದೇ ಸರಿ ಎಂಬಂಥ ವರ್ತನೆಯಿಂದ ಹೆತ್ತವರಿಗೂ ನುಂಗಲಾರದ ತುತ್ತಿನಂಥಾಗಿತ್ತು. ಮಿಲಿಟರಿಯಿಂದ ಸ್ವಯಂ ನಿವೃತ್ತಿ ಪಡೆದಿದ್ದ ಪ್ರಭಾಕರರಾಯರು, ತಾವು ಸ್ವತಃ ಶಿಸ್ತಿನ ಸಿಪಾಯಿಯಂತಿದ್ದರೂ, ಮಗನಲ್ಲಿ ಅದನ್ನು ಅಳವಡಿಸಲಾರದ ತಮ್ಮ ವಿವಶತೆಯಲ್ಲಿ ಸೋತರು. ಅವನಿಗೆ ಖರ್ಚಿಗೆ ಹಣವೇ ನೀಡುತ್ತಿರಲಿಲ್ಲವಾದರೂ, ಅದು ಹೇಗೋ ಸೂರ್ಯನ ಕಿಸೆಯಲ್ಲಿ ಹಣವಿರುತ್ತಿದ್ದುದು ಅವರ ಗಮನಕ್ಕೂ ಬಂದಿತ್ತು.

'ಇಷ್ಟು ಹಣ ಎಲ್ಲಿಂದ ಬಂತೋ?' ಎಂದು ಕೇಳಿದರೆ,

'ನೀನೇನೂ ಕೊಡೋದಿಲ್ವಲ್ಲಾ.. ನಾನು ಹೇಗೋ ಸಂಪಾದಿಸ್ತೀನಿ. ನಿನಗ್ಯಾಕೆ ಅದು?' ಎಂದು ರೇಗುತ್ತಿದ್ದ. ಹೀಗಿರುವಾಗಲೇ ಎಂಟನೇ ತರಗತಿ ಮುಗಿಸಿ ಒಂಭತ್ತನೇ ತರಗತಿಗೆ ಕಾಲಿಟ್ಟಿದ್ದ. ಆಗಲೇ ಆ ಘಟನೆ ಜರುಗಿತ್ತು.

**ಅಧ್ಯಾಯ17**

ಆ ರಾತ್ರಿ ತಡವಾದರೂ ಸೂರ್ಯ ಮನೆಗೆ ಬಂದಿರಲಿಲ್ಲ. ಅವನಿಗಾಗಿ ಕಾಯುತ್ತ ಕುಳಿತ ವಿಜಯಮ್ಮನಿಗೆ ಬಂದದ್ದು ಟೆಲಿಫೋನ್ ಕರೆ.

'ಕೂಡ್ಲೇ ಜರಗನಹಳ್ಳಿ ಸ್ಟೇಷನ್‌ಗೆ ಬನ್ನಿ... ನಿಮ್ಮ ಮಗ ಇಲ್ಲಿದ್ದಾನೆ.'

'ನನ್ಮಗ ಸ್ಟೇಷನ್‌ನಲ್ಲಾ? ಯಾಕೆ.. ಏನಾಯ್ತು?'

'ಇಲ್ಲಿ ತಕ್ಷಣ ಬನ್ನಿ' ಎಂಬ ಸಂದೇಶ. ರಾಯರೊಡನೆ, ವಿಜಯಮ್ಮ ಕೂಡಾ ಹೊರಟು ಜರಗನಹಳ್ಳಿ ಸ್ಟೇಷನ್‌ಗೆ ಬಂದಾಗ ಸೂರ್ಯನನ್ನು ಸೆಲ್‌ನಲ್ಲಿ ಕೂಡಿ ಹಾಕಲಾಗಿತ್ತು. ಅವನ ಅಂಗಿಯ ಮೇಲೆಲ್ಲ ರಕ್ತದ ಕಲೆ. ಹೆತ್ತವರನ್ನು ಕಂಡೊಡನೆ ಕಣ್ಣೀರು ಹಾಕಲು ಶುರು ಮಾಡಿದ್ದ. ಅವನೊಡನೆ ಇನ್ನೂ ಮೂವರು ಅವನದೇ ವಯಸ್ಸಿನ ಹುಡುಗರಿದ್ದರು. ಎಂದೂ ಅಳದ ಮಗನನ್ನು ಆ ಸ್ಥಿತಿಯಲ್ಲಿ ಕಂಡು ಹೆತ್ತವರು ವಿಚಲಿತರಾದರು.